ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟು ಪ್ರದೇಶ ಕುರಿತು

726 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟು ಪ್ರದೇಶದಲ್ಲಿ ತಲಾ ಎಕರೆಗೆ ವೆಚ್ಚ ಮಾಡುತ್ತಿರುವ ನಿರ್ವಹಣಾ ವೆಚ್ಚವೆಷ್ಟು?*

ಆ) *ಈ ಮೊಬಲಗು ಯಾವಾಗ ನಿಗದಿಗೊಳಿಸಲಾಗಿದೆ?*

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) 1989-90 ರಿಂದ 1992-93ರ ಸಾಲಿನವರೆಗೆ ಸರಾಸರಿ ಎಕರೆ ಒಂದಕ್ಕೆ 130-00 ರೂಪಾಯಿಗಳು.

ಆ) ಇದು 1987-88ನೇ ಸಾಲಿನಿಂದ ಚಾಲ್ತಿಯಿಂದಿರುತ್ತದೆ.

ಗಡಿ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಭಾಗ್ಯ ಜ್ಯೋತಿ ದೀಪಗಳನ್ನು ಅಳವಡಿಸುವ ಬಗ್ಗೆ

796 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗಡಿ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಹರಿಜನ ಗಿರಜನರಿಗೆ ಮೀಸಲಾಗಿಸಿರುವ ಹಣದಲ್ಲಿ ಭಾಗ್ಯಜ್ಯೋತಿ ದೀಪಗಳನ್ನು ಬಡವರ ಮನೆಗಳಿಗೆ ಅಳವಡಿಸಲು ಸರ್ಕಾರಕ್ಕೆ ಮನವಿ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಅದರ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ತೀರ್ಮಾನವೇನು?*

ಶ್ರೀ ಶ್ರೀರಂಗದೇವ ರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):

ಅ) ಹೌದು.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ತುಂಗಾ ಮೇಲ್ದಂಡೆ ಯೋಜನೆ ಜಾರಿ ಕುರಿತು

765 - ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಂಗಾ ಮೇಲ್ದಂಡೆ ಯೋಜನೆಯನ್ನು ಜಾರಿಗೆ ತರುವಾಗ ಮಾಲತಿ ಜಲಾನಯನ ಮುಳುಗಡೆಯಾಗುವದೆ.*

ಆ) *ತುಂಗಾ ಮೇಲ್ದಂಡೆ ಯೋಜನೆಯ ಬಗ್ಗೆ ತಜ್ಞರಿಂದ ಸಂಪೂರ್ಣವಾಗಿ ವರದಿ ತಯಾರು ಮಾಡಲಾಗಿದೆಯೇ.*

ಇ) *ತುಂಗಾ ಮೇಲ್ದಂಡೆ ಯೋಜನೆ ಜಾರಿಗೆ ತರುವಾಗ ಮಾಲತಿ ಜಲಾನಯನ ಗಾಜನೂರಿನ ಹತ್ತಿರ 1200 ಪ್ಲಾಟಿನ ಗೇಟ್ ಕಟ್ಟೆ ಜಾರಿಗೆ ತಂದರೆ ಧಾರವಾಡ ಜಿಲ್ಲೆಯ ಶಿಗ್ಗಾಂವ, ಸವಣೂರ್, ಶಿರಹಟ್ಟಿ, ಮುಂಡರಗಿ ಮುಂತಾದ ತಾಲ್ಲೂಕುಗಳ ಪ್ರದೇಶಕ್ಕೆ ನೀರಾವರಿ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.*

ಈ) *ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?*

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಇಲ್ಲ

ಆ) ಹೌದು

ಇ) ಮತ್ತು ಈ) ಈ ಯೋಜನೆಯ ವ್ಯಾಪ್ತಿಯಲ್ಲಿ ಧಾರವಾಡ ಜಿಲ್ಲೆಯ ಶಿಗ್ಗಾಂಡ, ಸವಣೂರ, ಶಿರಹಟ್ಟಿ, ಮುಂಡರಗಿ ತಾಲ್ಲೂಕುಗಳು ಸೇರಿರುವುದಿಲ್ಲವಾದ್ದರಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ದಿನಾಂಕ: 28-3-1994ರಂದು ಲಿಖಿತ ಮೂಲಕ ಉತ್ತರಿಸುವ 14ನೇ ಪಟ್ಟಿಯಲ್ಲಿರುವ 57 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ- 652:794:678:650:696:654:447:485:453:623:665: ಕ್ರಮಾಂಕದ ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ 45 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಸೇಡಂ ತಾಲ್ಲೂಕಿನ ಅಲಿಪೂರ ಕೆರೆಯ ಒಳಗಡೆ ಮುಳುಗಿರುವ ರೈತರ ಬೆಳೆಗೆ ಪರಿಹಾರ ನೀಡುವ ಬಗ್ಗೆ

736 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಅಲ್ಲಿಪೂರ ಕೆರೆ ಕೆಲಸ ಪ್ರಾರಂಭವಾಗಿ ಆಯಕಟ್ಟಿನ ಒಳಗಿರುವ ಭೂಮಿಯಲ್ಲಿ ಕಳೆದೆರೆಡು ವರ್ಷದಿಂದ ಮಣ್ಣು ತೆಗೆದು ಏರಿಗೆ ಉಪಯೋಗಿಸಿ ಬೆಳೆ ಇಲ್ಲದೆ ನಷ್ಟ ಹೊಂದಿರುವ ರೈತರಿಗೆ ಬೆಳೆಯ ಹಾಗೂ ಭೂಮಿ ಪರಿಹಾರ ಧನ ನೀಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಭೂಸ್ವಾಧೀನಪಡಿಸಿಕೊಳ್ಳುವ ವಿಧಿ ವಿಧಾನ ಪೂರ್ತಿ ಆಗದೆ, ರೈತರಿಗೆ ತಮ್ಮ ಭೂಮಿಯ ಬೆಲೆ ಕೇಳಲು ಅವಕಾಶ ನೀಡದೆ ಒತ್ತಾಯದಿಂದ ಬಡ ರೈತರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವುದು ಸರಿಯೇ;

ಇ) ಈಗಲಾದರೂ ಎರಡು ವರ್ಷಗಳಿಂದ ನಷ್ಟವಾಗಿರುವ ಬೆಳೆಯ ಬೆಲೆ ಹಾಗೂ ಭೂ ಪರಿಹಾರ ಧನ ಮಾರ್ಕೆಟ್ಟ ಬೆಲೆಯಂತೆ ಆತೀ ಶೀಘ್ರದಲ್ಲಿ ಕೊಡುವ ವ್ಯವಸ್ಥೆ ಮಾಡಲಾಗುವುದೇ?

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಅಲಿಪೂರ ಕೆರೆಯ ಏರಿಯ ಕೆಲಸಕ್ಕೆ ಮುಳುಗಡೆ ಹೊಂದಲಿರುವ ಪ್ರದೇಶ ಭೂಮಿಯಿಂದ ಮಣ್ಣು ತೆಗೆದು ಉಪಯೋಗಿಸಲಾಗುತ್ತಿದೆ. ಈ ಭೂಮಿಯಲ್ಲಿ ಯಾವುದೇ ಬೆಳೆ ಇಲ್ಲದಿದ್ದಾಗ ಮಣ್ಣು ತೆಗೆದುಕೊಂಡಿರುವ ಕಾರಣ ಬೆಳೆ ಪರಿಹಾರ ಕೊಡುವ ಪ್ರಮೇಯ ಉಂಟಾಗುವುದಿಲ್ಲ. ಆದರೆ ಭೂ ಪರಿಹಾರಕ್ಕೆ ಸಂಬಂಧಿಸಿದಂತೆ ಎಲ್ಲಾ ಪ್ರಕರಣಗಳು ಭೂಸ್ವಾಧೀನ ಕಾಯ್ದೆಯ ಪ್ರಕಾರ ಭೂಮಾಲೀಕರಿಗೆ ನೋಟೀಸ್ಗಳನ್ನು ಜಾರಿಗೊಳಿಸಿದ್ದು ಐತೀರ್ಪು ತನಿಖೆ ನಡೆದಿರುತ್ತದೆ. ಪರಿಹಾರ ಧನವನ್ನು ಬಡ್ಡಿ ಸಮೇತ ಪಾವತಿ ಮಾಡಲು ಶೀಘ್ರಕ್ರಮ ಕೈಗೊಳ್ಳಲಾಗುವುದು.

ಆ) ಭೂಮಾಲೀಕರಿಗೆ ಭೂಸ್ವಾಧೀನ ಕಾಯಿದೆ ಕಲಂ 9(1) ಮತ್ತು 10ರ ಅನ್ವಯ ತಮ್ಮ ಜಮೀನುಗಳಿಗೆ ಬೆಲೆ ಕೇಳಲು ಅವಕಾಶವಿದ್ದು ಒತ್ತಾಯದ ಪ್ರಶ್ನೆ ಬರುವುದಿಲ್ಲ.